

ಕಂಪೆನಿಯೊಂದರ ಸಿಇಒ ತನ್ನ ಒಂದು ಫ್ಯಾಕ್ಟ್ರಿಗೆ ವಿಸಿಟ್ ಕೊಟ್ಟ. ಅಲ್ಲಿ ಎಲ್ಲಾ ನೌಕರರು ತಮ್ಮ–ತಮ್ಮ ಕೆಲಸ ಮಾಡುತ್ತಿದ್ದರು. ಆದರೆ ಒಬ್ಬ ಯುವಕ ಮೂಲೆಯಲ್ಲಿ ನಿಂತು ತನ್ನ ಮೊಬೈಲ್‌ನ ಸಂದೇಶವನ್ನು ಓದಿ ಮುಗುಳ್ನಗುತ್ತಿದ್ದ.

ಸಿಇಒ ಸಿಟ್ಟುಬಂತು. ಅವನ ಬಳಿ ಬಂದು ಕೇಳಿದ, 'ನಿನಗೆ ಎಷ್ಟು ಸಂಬಳ ಸಿಗುತ್ತೆ?'

'ಹತ್ತು ಸಾವಿರ.'

ಸಿಇಒ ತನ್ನ ಜೇಬಿನಿಂದ ಇಪ್ಪತ್ತು ಸಾವಿರ ರೂಪಾಯಿಗಳನ್ನು ಅವನಿಗೆ ಕೊಟ್ಟು, 'ಗೆಟ್‌ಔಟ್! ನಿನ್ನಂಥ ನೌಕರರಿಗೆ ನಮ್ಮ ಕಂಪೆನಿಯಲ್ಲಿ ಜಾಗವಿಲ್ಲ' ಎಂದ.

ಆತ ಹಣ ಪಡೆದು ಕೂಡಲೇ ಹೊರಟ.

ಸಿಇಒ ಅಲ್ಲಿದ್ದ ಇತರ ನೌಕರರ ಹತ್ತಿರ ಆ ಯುವಕನ ಬಗ್ಗೆ ವಿಚಾರಿಸಿದ.

ಒಬ್ಬ ನೌಕರ ಹೇಳಿದ, 'ಸಾರ್, ಅವನು ಊಟ ಸರಬರಾಜು ಮಾಡುವವ. ಇವತ್ತು ನಮ್ಮ ಮ್ಯಾನೇಜರ್ ಲಂಚ್ ಬಾಕ್ಸ್ ತಂದಿರಲಿಲ್ಲ,' ಅದ್ಕೆ...

★★★

ಮಿತ್ರರಿಬ್ಬರು ಒಂದೇ ಬ್ಯಾಂಕಿನಲ್ಲಿ ನೌಕರರಾಗಿದ್ದರು. ಅದೊಂದು ದಿನ ನಾಲ್ಕು ಜನ ದರೋಡೆಕೋರರು ಬ್ಯಾಂಕ್‌ಗೆ ಮುತ್ತಿಗೆ ಹಾಕಿದರು. ಅವರು ಇಡೀ ಬ್ಯಾಂಕನ್ನು ಕೊಳ್ಳೆಹೊಡೆದರು. ಸಿಬ್ಬಂದಿಯನ್ನು ಗೋಡೆಯ ಬಳಿ ಸಾಲಾಗಿ ನಿಲ್ಲಿಸಿದರು. ಅವರಲ್ಲಿದ್ದ ಪರ್ಸ್, ವಾಚ್, ಉಂಗುರ– ಸರಗಳನ್ನು ದೋಚಿದರು. ಆ ಇಬ್ಬರು ಮಿತ್ರರೂ ಅಕ್ಕಪಕ್ಕ ನಿಂತಿದ್ದರು. ಒಬ್ಬ, ಎರಡನೆಯವನ ಕೈಗೆ ಏನೋ ತುರುಕಿದ.

'ಏನಿದು?' ಎರಡನೆಯ ಮಿತ್ರ ಪ್ರಶ್ನಿಸಿದ.

'ನಾನು ಮೊನ್ನೆ ನಿನ್ನಲ್ಲಿ ಸಾಲ ಪಡೆದಿದ್ದ ಐದುನೂರು!' ಎಂದ.

★★★

ಅಲ್ಲಿ ಆರ್ಮಿ ಟ್ರೈನಿಂಗ್ ನಡೆಯುತ್ತಿತ್ತು. ತರಬೇತಿಯ ವೇಳೆಯಲ್ಲಿ ತರಬೇತುದಾರ ಪರಮ್ ಸಿಂಗ್ ಸೈನಿಕನನ್ನು ಕೇಳಿದ, 'ನಿನ್ನ ಕೈಯಲ್ಲಿ ಏನಿದೆ?'

'ಸಾರ್, ಬಂದೂಕು.'

'ಇವು ಬಂದೂಕುಗಳಲ್ಲ. ಇವು ನಮ್ಮ ಮಾನ– ಮರ್ಯಾದೆ. ನಮ್ಮ ತಾಯಿಯಿದ್ದಂತೆ.'

ಸರಿ, ಕರ್ನಲ್ ಅಲ್ಲಿಂದ ಎದುರು ಸಾಲಿನ ಸೈನಿಕನ ಬಳಿಗೆ ಹೋಗಿ ಅವನಿಗೂ ಇದೇ ಪ್ರಶ್ನೆಯನ್ನು ಕೇಳಿದ.

'ಸಾರ್, ಇದು ಪರಮ್ ಸಿಂಗ್‌ನ ತಾಯಿ ಮತ್ತು ನಮ್ಮ ಆಂಟಿ!' ಎಂದ ಸೈನಿಕ.

ಒಬ್ಬ ಕರ್ನಲ್ ತನ್ನ ಸೈನಿಕನಿಗೆ ಹೇಳಿದ. 'ನೀನು ನನ್ನನ್ನು ನದಿಯಲ್ಲಿ ಮುಳುಗುತ್ತಿದ್ದವನನ್ನು ರಕ್ಷಿಸಿದೆ. ಈ ವಿಷಯವನ್ನು ನಾಳೆ ಪರೇಡ್‌ನಲ್ಲಿ ಎಲ್ಲಾ ಸೈನಿಕರಿಗೂ ಹೇಳ್ತೀನಿ.'

'ಬೇಡ ಸಾರ್. ಬೇರೆ ಸೈನಿಕರಿಗೆ ಈ ವಿಷಯ ತಿಳಿದರೆ ಅವರು ನನ್ನನ್ನು ಕೂಡಲೇ ಅದೇ ನದಿಗೆ ಎಸೆದುಬಿಡ್ತಾರೆ' ಎಂದು ಆತ ಕರ್ನಲ್‌ಗೆ ಕೈಮುಗಿದ.

★★★

(ಸಂಗ್ರಹ) ಡಿ.ಎಸ್. ಶ್ರೀನಾಥ್



ತಂದೆ: ಪಕ್ಕದ ಮನೆಯಲ್ಲಿ ಏನೋ ಗಲಾಟೆ ಯಾಗುತ್ತಿದೆ. ಸ್ವಲ್ಪ ನೋಡುು?

ಮಗ: ಸ್ವಲ್ಪ ತಾಳು ಸಂಜೆ ಟಿವಿ ನ್ಯೂಸ್‌ನಲ್ಲಿ ಗೊತ್ತಾಗುತ್ತದೆ.

★★★

ತಂದೆ: ನಮ್ಮ ದೇಶದ ಜನಸಂಖ್ಯೆ ಎಷ್ಟೋ?

ಮಗ: ಜನಗಣತಿ ಪ್ರಕಾರ 120 ಕೋಟಿ... ರೇಷನ್ ಕಾರ್ಡ್ ಪ್ರಕಾರ 170 ಕೋಟಿ.

(ಸಂಗ್ರಹ) ರಮಾನಂದ ಶರ್ಮಾ

ಪ್ರಿನ್ಸಿಪಾಲ್: ಈ ತರಗತಿಯಲ್ಲಿ ಒಬ್ಬಿಬ್ಬರಾದರೂ ಮೂರ್ಖ ಶಿಖಾಮಣಿ ಇರಲೇಬೇಕು. ಅಂತವರು ಎದ್ದು ನಿಲ್ಲಿ.

(ಕಡೇ ಬೆಂಚಿನ ಗುಂಡ ಎದ್ದುನಿಂತ)

ಗುಡ್, ನಾನೆಣಿಸಿದಂತೆ ಒಬ್ಬ ಮೂರ್ಖನಿದ್ದಾನೆ.

ಗುಂಡ: ಹಾಗಲ್ಲ ಸಾರ್, ಆ ಕಡೆ ನೀವು, ಮಿಸ್ ಇಬ್ಬರು ನಿಂತಿದ್ದೀರಲ್ಲ. ಈ ಕಡೆಯಿಂದ ಒಬ್ಬನಾದರೂ ಇರ್ಲಿ... ಅಂತ.

(ಸಂಗ್ರಹ) ಹಾಡ್ಯ ಬ.ಜಯಾನಂದ



**ಆಘಾತ!**

ಬೈಕಿನಲ್ಲಿ 4 ಮಂದಿ ಹುಡುಗರು ಸವಾರಿ ಮಾಡುತ್ತಿದ್ದರು.

ಪೊಲೀಸ್: ಬೈಕಿನಲ್ಲಿ 3 ಜನರು ಸವಾರಿ ಮಾಡುವುದೇ ಸಂಚಾರಿ ನಿಯಮದ ಉಲ್ಲಂಘನೆಯಾಗಿರುವಾಗ ನೀವು 4 ಜನ ಸವಾರಿ ಹೋಗುತ್ತಿದ್ದೀರಾ...?

ಹುಡುಗರಿಗೆ ಆಘಾತವಾಯಿತು...?

ಹಿಂತಿರುಗಿ ನೋಡುತ್ತಲೇ ಒಕ್ಕೊರಲಿನಿಂದ ಕಿರುಚಿದರು, 'ಅರೆ ಐದನೆಯವನೆಲ್ಲಿ ಬಿದ್ದು ಬಿಟ್ಟ...?!'

(ಸಂಗ್ರಹ) ರಮಣಶೆಟ್ಟಿ ರೆಂಜಾಳ್